**<u>ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಓ.ಎಸ್. ನಂ. 10/2021**

| | | | |
|---|---|---|---|
| **ಹೆಸರು** | **:** | **ಚಂದ್ರಶೆಟ್ಟಿ ಜಾದವ** | |
| **ತಂದೆಯ ಹೆಸರು** | **:** | **ವಿಠಲ್ ಜಾದವ** | **ಡಿ.ಡಬ್ಲ್ಯು. 3** |
| **ವಯಸ್ಸು** | **:** | **42 ವರ್ಷ** | **ದಿನಾಂಕಃ 23-11-2023** |
| **ಉದ್ಯೋಗ** | **:** | **ವಕೀಲರು** | |
| **ವಾಸಸ್ಥಳ** | **:** | **ಚಂದಾಪೂರ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯವಿಚಾರಣೆಃ ಪ್ರತಿವಾದಿ ಪರವಾಗಿ ಶ್ರೀ ಎನ್.ಸಿ.ಹೆಚ್. ವಕೀಲರಿಂದಃ</u>**

ನಾನು 2006 ನೇ ಇಸವಿಯಿಂದ ಇಲ್ಲಿವರೆಗೆ ವಕೀಲನಾಗಿ ಮತ್ತು 2016 ರಿಂದ ಇಲ್ಲಿವರೆಗೆ ರಾಜ್ಯ ಸರ್ಕಾರಿ ನೋಟರಿಯಾಗಿ ಚಿಂಚೋಳಿಯಲ್ಲಿ ಕೆಲಸ ಮಾಡುತ್ತಿದ್ದೇನೆ.

ಸಾಕ್ಷಿಗೆ ನಿಡಿ-1 ರ ದಾಖಲೆಯನ್ನು ತೋರಿಸಲಾಯಿತು. ಈಗ ನನಗೆ ತೋರಿಸಲಾದ ನಿಡಿ-1 ರ ದಾಖಲೆಯಲ್ಲಿರುವ ನೋಟರಿ ಮೋಹರು ಮತ್ತು ಸಹಿಗಳು ನನ್ನದೆ. ಸಾಕ್ಷಿ ನೋಡಿ ಗುರುತಿಸಿದ ಎರಡು ಮೋಹರನ್ನು ಮತ್ತು ಸಹಿಗಳನ್ನು ಒಟ್ಟಾಗಿ ಕ್ರಮವಾಗಿ ನಿಡಿ-1(ಬಿ) ಮತ್ತು (ಸಿ) ಎಂದು ಗುರುತಿಸಲಾಯಿತು. ನಿಡಿ-1 ರ ದಾಖಲೆ ಮೃತ್ಯು ಪತ್ರವಾಗಿದೆ. ಸದರಿ ದಾಖಲೆಯನ್ನು ಇಮಾಮ್ ಸಾಬ ಎಂಬುವವರು ಮೊದಲೇ ಟೈಪ್ ಮಾಡಿಸಿ ನನ್ನ ಬಳಿ ತಂದಿದ್ದರು. ಸದರಿ ದಾಖಲೆಯನ್ನು ನಾನು ಇಮಾಮ್ ಸಾಬನಿಗೆ ಓದಿ ಹೇಳಿರುತ್ತೇನೆ. ಆತನಿಗೆ ಸಂಬಂಧಪಟ್ಟ ಆಧಾರ್ ಕಾರ್ಡನ್ನು ಪಡೆದುಕೊಂಡು ಪರಿಶೀಲನೆ ಮಾಡಿರುತ್ತೇನೆ. ಇಮಾಮ್ ಸಾಬನ ಜೊತೆ ಈ ದಾವೆಯ 2 ನೇ ಪ್ರತಿವಾದಿ ರಸೂಲಬೀ, ಸಾಕ್ಷಿದಾರರಾದ ಚಂದ್ರಶೇಖರ ಮಲಗೊಂಡ, ಲಕ್ಷ್ಮಾರೆಡ್ಡಿ ಮತ್ತು ಭೀಮಶಪ್ಪ ಸಹ ನನ್ನ ಬಳಿ ಬಂದಿದ್ದರು.

ನಿಡಿ-1 ರ ದಾಖಲೆಯನ್ನು ನಾನು ಓದಿ ಅದನ್ನು ಇಮಾಮ್ ಸಾಬನಿಗೆ ಮತ್ತು ರಸೂಲಬೀ ಅವರ ಜೊತೆ ಇದ್ದ ಸಾಕ್ಷಿದಾರರ ಸಮಕ್ಷಮ ಓದಿ ಹೇಳಿದ್ದನ್ನು ಇಮಾಮ್ ಸಾಬ ಸರಿ ಇದೆ ಎಂದು

ಒಪ್ಪಿಕೊಂಡ ನಂತರ ಸದರಿ ದಾಖಲೆಗೆ ನಾನು ನನ್ನ ಮೋಹರು ಮತ್ತು ಸಹಿಯನ್ನು ಹಾಕಿರುತ್ತೇನೆ. ನಿಡಿ-1 ರ ದಾಖಲೆಗೆ ಇಮಾಮ್ ಸಾಬ ಮತ್ತು ರಸೂಲ್ ಬೀ ನನ್ನ ಮುಂದೆ ಹೆಬ್ಬೆಟ್ಟಿನ ಗುರುತು ಹಚ್ಚಿದರು ಹಾಗೂ ಮೂರು ಜನ ಸಾಕ್ಷಿದಾರರು ನನ್ನ ಸಮಕ್ಷಮವೇ ಸಹಿ ಹಾಕಿರುತ್ತಾರೆ.

ಇಮಾಮ್ ಸಾಬ ಮತ್ತು ರಸೂಲಬೀ ರವರ ಹೆಬ್ಬೆಟ್ಟಿನ ಗುರುತುಗಳನ್ನು ಈಗ ನೋಡಿ ಗುರುತಿಸುತ್ತಿದ್ದೇನೆ. ಸಾಕ್ಷಿ ಇಮಾಮ್ ಸಾಬನದ್ದು ಎಂದು ನೋಡಿ ಗುರುತಿಸಿದ ಮೂರು ಹೆಬ್ಬೆಟ್ಟಿನ ಗುರುತುಗಳನ್ನು ಕ್ರಮವಾಗಿ ನಿಡಿ-1(ಡಿ) ರಿಂದ (ಎಫ) ಎಂದು ಗುರುತಿಸಲಾಯಿತು. ಸಾಕ್ಷಿ ರಸೂಲಬೀರದ್ದು ಎಂದು ನೋಡಿ ಗುರುತಿಸಿದ ಮೂರು ಹೆಬ್ಬೆಟ್ಟಿನ ಗುರುತುಗಳನ್ನು ನಿಡಿ-1(ಜಿ) ರಿಂದ (ಐ) ಎಂದು ಗುರುತಿಸಲಾಯಿತು. ಸಾಕ್ಷಿದಾರರಾದ ಚಂದ್ರಶೇಖರ ಮತ್ತು ಭೀಮಣ್ಣ ಎಂಬುವವರದ್ದು ಎಂದು ಸಾಕ್ಷಿ ಗುರುತಿಸಿದ ಸಹಿಗಳನ್ನು ಈಗ ಕ್ರಮವಾಗಿ ನಿಡಿ-1(ಜೆ) ಮತ್ತು (ಕೆ) ಎಂದು ಗುರುತಿಸಲಾಯಿತು. ಸಾಕ್ಷಿ ಲಕ್ಷ್ಮಾರೆಡ್ಡಿ ಎಂಬಾತನದ್ದು ಎಂದು ನೋಡಿ ಗುರುತಿಸಿದ ಸಹಿಯನ್ನು ಈಗಾಗಲೇ ನಿಡಿ-1(ಎ) ಎಂದು ಗುರುತಿಸಲಾಗಿದೆ.

ನಿಡಿ-1 ರ ದಾಖಲೆಯನ್ನು ನೋಟರಿಕರಿಸಿದ ನಂತರ ಅದನ್ನು ನೋಟರಿ ರಜಿಸ್ಟರ ಪುಸ್ತಕದಲ್ಲಿ ಕ್ರಮ ಸಂಖ್ಯೆ 603 ರಲ್ಲಿ ನಮೂದು ಮಾಡಿರುತ್ತೇನೆ ಮತ್ತು ಇಮಾಮ್ ಸಾಬನಿಂದ ಹಣ ಪಡೆದು ಆತನಿಗೆ ರಸೀದಿ ಕೊಟ್ಟಿರುತ್ತೇನೆ.

ಮೂಲ ನೋಟರಿ ರಜಿಸ್ಟರ ಪುಸ್ತಕ ಮತ್ತು ರಸೀದಿ ಪುಸ್ತಕವನ್ನು ಈಗ ನ್ಯಾಯಾಲಯಕ್ಕೆ ಹಾಜರು ಪಡಿಸುತ್ತಿದ್ದೇನೆ. ಸಾಕ್ಷಿ ಹಾಜರು ಪಡಿಸಿದ ಮೂಲ ನೋಟರಿ ಪುಸ್ತಕವನ್ನು ಈಗ ನಿಡಿ-3 ಎಂದು ಗುರುತಿಸಲಾಯಿತು. ಪುಟ ಸಂಖ್ಯೆ 131 ರಲ್ಲಿ ನಿಡಿ-1 ರ ದಾಖಲೆಗೆ ಸಂಬಂಧಿಸಿದ್ದು ಎನ್ನಲಾದ ಕ್ರಮ ಸಂಖ್ಯೆ 603 ರ ಕಂಡಿಕೆ ಭಾಗವನ್ನು ಒಟ್ಟಾಗಿ ನಿಡಿ-3(ಎ) ಎಂದು ಗುರುತಿಸಲಾಯಿತು. ನಿಡಿ-3 ರ ಕಂಡಿಕೆಯಲ್ಲಿ ಇಮಾಮ್ ಸಾಬ ಮತ್ತು ರಸೂಲಬೀ ರವರ ಸಹಿ ಇದೆ ಎಂದು ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಹೆಬ್ಬೆಟ್ಟಿನ ಗುರುತುಗಳನ್ನು ಕ್ರಮವಾಗಿ ನಿಡಿ-3(ಬಿ) ಮತ್ತು (ಸಿ) ಎಂದು ಗುರುತಿಸಲಾಯಿತು. ನಿಡಿ-3 (ಎ) ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಡಿ-3(ಡಿ) ಎಂದು ಗುರುತಿಸಲಾಯಿತು.

ಅದೇ ರೀತಿ ಸಾಕ್ಷಿ ಹಾಜರು ಪಡಿಸಿದ ರಸೀದಿ ಪುಸ್ತಕ ಸಂಖ್ಯೆ 7 ನ್ನು ನಿಡಿ-4 ಎಂದು ಗುರುತಿಸಲಾಯಿತು. ಇಮಾಮ್ ಸಾಬನಿಗೆ ಕೊಡಲಾಗಿತ್ತು ಎನ್ನಲಾದ ರಸೀದಿಯ ಕೌಂಟರ್ ಪ್ರತಿ ಕ್ರಮ ಸಂಖ್ಯೆ 603 ರನ್ನು ನಿಡಿ-4(ಎ) ಎಂದು ಮತ್ತು ಇಮಾಮ್ ಸಾಬನದ್ದು ಎನ್ನಲಾದ ಹೆಬ್ಬೆಟ್ಟಿನ

ಗುರುತನ್ನು ನಿಡಿ-4(ಬಿ) ಎಂದು ಗುರುತಿಸಲಾಯಿತು.

**(ಸಾಕ್ಷಿ ಹಾಜರು ಪಡಿಸಿದ ನಿಡಿ-3 ಮತ್ತು 4 ರ ಮೂಲ ರಜಿಸ್ಟರ ಹಾಗೂ ರಸೀದಿ ಪುಸ್ತಕಗಳು ತನ್ನ ದಿನನಿತ್ಯದ ಕೆಲಸ ಕಾರ್ಯಗಳಿಗೆ ಬೇಕಾಗುವುದರಿಂದ ಅವುಗಳನ್ನು ಹಿಂದಿರುಗಿಸಬೇಕೆಂದು ಕೋರಿಕೊಂಡ ಮೇರೆಗೆ, ನಿಡಿ-3, ಅದರ ಉಪನಿಶಾನೆಗಳು, ನಿಡಿ-4 ಮತ್ತು ಅದರ ಉಪನಿಶಾನೆಗಳ ದೃಢೀಕೃತ ನಕಲನ್ನು ನ್ಯಾಯಾಲಯಕ್ಕೆ ಸಲ್ಲಿಸುವಂತೆ 2 ನೇ ಪ್ರತಿವಾದಿಗೆ ಆದೇಶಿಸಿ ನಿಡಿ-3 ಮತ್ತು 4 ರ ಮೂಲ ದಾಖಲೆಗಳನ್ನು ಸಾಕ್ಷಿಗೆ ಹಿಂದಿರುಗಿಸಲು ಆದೇಶಿಸಿದೆ.)**

**ಪಾಟೀ ಸವಾಲುಃ ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**